# ಒರ್ಹಾನ್ ಪಾಮುಕ್ ಅವರ ಭಾಷಾಂತರ ಕುರಿತು ಉಪನ್ಯಾಸ

ನೊಬೆಲ್ ಪ್ರಶಸ್ತಿ ಪಡೆದ ಲೇಖಕ ಒರ್ಹಾನ್ ಪಾಮುಕ್ ಅವರ ಕೃತಿಗಳ ಭಾಷಾಂತರ ಕುರಿತು ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಾ. ಕೆ.ಎಸ್. ವೈಶಾಲಿ ಅವರು ಉಪನ್ಯಾಸ ನೀಡಲಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಕೇಂದ್ರ 'ಶಬ್ದನಾ' ಆಯೋಜಿಸಿರುವ ಈ ಕಾರ್ಯಕ್ರಮದ ಅಧ್ಯಕ್ಷತೆ ಸಾಹಿತಿ ಕೆ. ಸತ್ಯನಾರಾಯಣ ಅವರದು. ಟರ್ಕಿ ದೇಶದ ಒರ್ಹಾನ್ ಪಾಮುಕ್ ಅವರ ಕೃತಿಗಳು ಇತ್ತೀಚೆಗೆ ಕನ್ನಡದಲ್ಲಿ ಸಾಕಷ್ಟು ಚರ್ಚೆಗೆ ಒಳಗಾಗುತ್ತಿವೆ. ವೈಶಾಲಿಯವರು ಅನುವಾದಿಸಿರುವ 'ಹಿಮ' ('ಸ್ನೋ') 2002ರಲ್ಲಿ ಟರ್ಕಿ ದೇಶದಲ್ಲಿ ಪ್ರಕಟಗೊಂಡ ರಾಜಕೀಯ ಕಾದಂಬರಿ. ಸಮಕಾಲೀನ ರಾಜಕೀಯ ಸಂದರ್ಭಗಳಲ್ಲಿ ಪ್ರಸ್ತುತವೆನಿಸುವ ಈ ಕಾದಂಬರಿ ಟರ್ಕಿ ದೇಶದ ಕಾರ್ಸ್ ಪಟ್ಟಣದಲ್ಲಿ ನಡೆಯುತ್ತದೆ. ಜನತೆಯನ್ನು ಪ್ರಜ್ಞಾವಂತರಾಗಿ ಮಾಡಲು ಹೆಣಗಿ ಭ್ರಮನಿರಸಗೊಂಡ ರಂಗ ಕಲಾವಿದ ದಂಪತಿ ಹಾಗೂ ಉಗ್ರ ಧಾರ್ಮಿಕ ಮೂಲಭೂತವಾದಿಗಳ ನಡುವಿನ ವೈಚಾರಿಕ ಸಂಘರ್ಷ ಈ ಕಾದಂಬರಿಯ ಮುಖ್ಯ ಅಂಶ.

ಕಾರ್ಯಕ್ರಮದ ವಿವರ: ಸೆಪ್ಟೆಂಬರ್ 27 ಶುಕ್ರವಾರ, ಸಂಜೆ 5ಕ್ಕೆ. ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕಚೇರಿಯ ಕಾನ್ಫರೆನ್ಸ್ ಹಾಲ್, ಅಂಬೇಡ್ಕರ್ ವೀಧಿಯ ಸೆಂಟ್ರಲ್ ಕಾಲೇಜು ಆವರಣ.